# ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

CIN: U85110KA1970SGC001919

ಪ್ರಧಾನ ಕಛೇರಿ: ನಂ.82, ಶಕ್ತಿಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001

ಸಹಾಯವಾಣಿ ಸೇವೆಯು ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆ ಮತ್ತು ಮಧ್ಯಾಹ್ನ:2.00 ಗಂಟೆಯಿಂದ ಸಂಜೆ:5.00 ಗಂಟೆ ವರೆಗೆ ಲಭ್ಯವಿರುತ್ತದೆ.

ದೂರವಾಣಿ : 080–22201820 ವೆಬ್‌ಸೈಟ್ www.karnatakapower.com

ಸಂಖ್ಯೆ: ಎ1ಪಿ1ಸಿ(ಎಲ್ಎ, ಆರ್&ಆರ್) ದಿನಾಂಕ:21.03.2022

## ಅಧಿಸೂಚನೆ

### ಗುತ್ತಿಗೆ ಆಧಾರದ ಮೇಲೆ ನೇಮಕಾತಿ

**ಉಲ್ಲೇಖ: ನೇಮಕಾತಿ ಅಧಿಸೂಚನೆ ಸಂಖ್ಯೆ: ಎ1ಪಿ1ಸಿ(ಎಲ್ಎ, ಆರ್&ಆರ್) ದಿನಾಂಕ 05.02.2022**

1970ನೇ ಇಸ್ವಿಯಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಎಲ್) ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು, ವಿದ್ಯುತ ಉತ್ಪಾದನೆಯಲ್ಲಿ ತೊಡಗಿದೆ. ಇದರ ಉನ್ನತ ಮಟ್ಟದ ಕಾರ್ಯನಿರ್ವಹಣೆಗಾಗಿ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ಸಹ ಗಳಿಸಿದೆ. ನಿಗಮದ ಭೂಸ್ವಾಧೀನ, ಪುನರ್‌ವಸತಿ ಮತ್ತು ಪರಿಹಾರದ ವಿಷಯಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸಲು 01 ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ **ಮುಖ್ಯಸ್ಥರು(ಭೂ–ಸ್ವಾಧೀನ, ಪುನರ್‌ವಸತಿ ಮತ್ತು ಪರಿಹಾರ)** ಹುದ್ದೆಗೆ ಈ ಕೆಳಕಂಡ ಅರ್ಹತೆಯಂತೆ ನೇಮಿಸಲು ನಿಗಮವು ಉದ್ದೇಶಿಸಿದೆ.

| ಕ್ರಮ ಸಂಖ್ಯೆ | ಹುದ್ದೆ | ಹುದ್ದೆಗಳ ಸಂಖ್ಯೆ | ನಿಗದಿಪಡಿಸಿದ ಅರ್ಹತೆ ಮತ್ತು ಅನುಭವ |
|---|---|---|---|
| 1 | ಮುಖ್ಯಸ್ಥರು (ಭೂ–ಸ್ವಾಧೀನ, ಪುನರ್‌ವಸತಿ ಮತ್ತು ಪರಿಹಾರ) | 01 | 1) ನಿವೃತ್ತ ಕೆಎಎಸ್ ಅಧಿಕಾರಿ.<br>2) ಭೂ–ಸ್ವಾಧೀನ, ಪುನರ್‌ವಸತಿ ಮತ್ತು ಪರಿಹಾರದ ವಿಷಯದಲ್ಲಿ ಅನುಭವ ಹೊಂದಿರಬೇಕು. |

1) **ಅರ್ಜಿ ಸಲ್ಲಿಸುವ ವಿಧಾನ:**

ನಿಗಮದ ವೆಬ್‌ಸೈಟ್ www.karnatakapower.comನಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ಅರ್ಜಿಯನ್ನು ಭರ್ತಿ ಮಾಡಿ ಲಕೋಟೆಯ ಮೇಲ್ಭಾಗದಲ್ಲಿ **"Application for the post of Head (LA, R&R)"** ಎಂದು ನಮೂದಿಸಿ ನೋಂದಾಯಿತ ಅಂಚೆ (Registered post) ಮುಖಾಂತರ ದಿನಾಂಕ:21.04.2022 ರೊಳಗಾಗಿ ತಲುಪುವಂತೆ ಕಳುಹಿಸುವುದು.

**ಸೂಚನೆ: ನಮ್ಮ ಅಧಿಸೂಚನೆ ಸಂಖ್ಯೆ ಎ1ಪಿ1ಸಿ(ಎಲ್ಎ, ಆರ್&ಆರ್) ದಿನಾಂಕ 05.02.2022 ಕ್ಕೆ ಈಗಾಗಲೇ ಮುಖ್ಯಸ್ಥರು(ಭೂ–ಸ್ವಾಧೀನ, ಪುನರ್‌ವಸತಿ ಮತ್ತು ಪರಿಹಾರ) ಹುದ್ದೆಗೆ ಅರ್ಜಿ ಸಲ್ಲಿಸಿರುವ ನಿವೃತ ಅಧಿಕಾರಿಗಳು ಪುನಃ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ. ಈಗ ಹೊರಡಿಸಲಾದ ಅಧಿಸೂಚನೆಗೆ ಅವರ ಅರ್ಜಿಗಳನ್ನು ಪರಿಗಣಿಸಲಾಗುವುದು.**

2) **ವಯೋಮಿತಿ:** 60 ರಿಂದ 70 ವರ್ಷಗಳು.

3) **ವೇತನ ಹಾಗೂ ಇತರೆ ಸೌಲಭ್ಯಗಳು:**

ಅ. ಸದರಿ ಹುದ್ದೆಗೆ ಮಾಹೆಯಾನ ಸಂಭಾವನೆ ರೂ.75,000/– (ಈಗ ಪಡೆಯುತ್ತಿರುವ ಪಿಂಚಣಿ ಹಾಗೂ ನಿಗಮದಿಂದ ಪಾವತಿಸಲಾಗುವ ಸಂಭಾವನೆ ಸೇರಿ ಅವರ ನಿವೃತ್ತ ಸಮಯದಲ್ಲಿ ಪಡೆಯುತ್ತಿದ್ದ ವೇತನವನ್ನು ಮೀರುವಂತಿಲ್ಲ) subject to deduction of Income Tax as per rules.

ಆ. ಕಾರ್ಯಸ್ಥಾನದ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರು, ಕ.ವಿ.ನಿ.ನಿ ರವರ ನಿರ್ಧಾರವೇ ಅಂತಿಮವಾಗಿರುತ್ತದೆ.

ಇ. ಕಾರ್ಯ ನಿಮಿತ್ತ ಅವಶ್ಯವಾಗಿ ಪ್ರಯಾಣ ಮಾಡಬೇಕಾಗಿ ಬಂದಲ್ಲಿ ನಿಗಮದ ಉಪ ಪ್ರಧಾನ ಪ್ರಬಂಧಕರವರಿಗೆ ಲಭ್ಯವಿರುವ ಪ್ರಯಾಣ/ದಿನ ಭತ್ಯೆಗೆ ಅರ್ಹರಿರುತ್ತಾರೆ.

ಈ. ನಿಗಮದಿಂದ Sim Card ನೀಡಲಾಗುವುದು.

ಉ. ಸಾಂದರ್ಭಿಕ ರಜೆ ತಿಂಗಳಿಗೆ ಒಂದು ಹಾಗೂ ಗಳಿಕೆ ರಜೆ ತಿಂಗಳಿಗೆ 2.5 (Non cashable) ಗಳನ್ನು ನೀಡಲಾಗುವುದು.

4) **ಆಯ್ಕೆ ವಿಧಾನ :**

ಸಂದರ್ಶನ ಮುಖಾಂತರ ಆಯ್ಕೆ ಮಾಡಲಾಗುವುದು.

5) **ಸಲ್ಲಿಸಬೇಕಾದ ದಾಖಲೆಗಳು :**

ವಯಸ್ಸು, ವಿದ್ಯಾರ್ಹತೆ, ಅನುಭವ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುವುದು(Self Attested).

i) ಜನ್ಮ ದಿನಾಂಕಕ್ಕೆ ಆಧಾರವಾಗಿ ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.

ii) ಅನುಭವ ಪ್ರಮಾಣ ಪತ್ರ.

iii) ನಿವೃತ ಸಮಯದಲ್ಲಿ ಪಡೆದ ವೇತನದ (Last pay drawn salary slip) ಹಾಗೂ ಪ್ರಸ್ತುತ ಪಡೆಯುತ್ತಿರುವ ಪಿಂಚಣಿಯ (pension slip) ದೃಢೀಕೃತ ಪ್ರತಿಗಳು.

iv) ಒಂದು ಭಾವಚಿತ್ರ.

6) **ಸಂದರ್ಶನಕ್ಕೆ ಹಾಜರಾಗಬೇಕಾದ ಸಂದರ್ಭದಲ್ಲಿ ನಿಗಮದಿಂದ ಅರ್ಜಿಸಲ್ಲಿಸಿದ ನಿವೃತ್ತ ಅಧಿಕಾರಿಗಳಿಗೆ ಯಾವುದೇ ಪ್ರಯಾಣ/ದಿನಭತ್ಯೆ (TA/DA) ನೀಡಲಾಗುವುದಿಲ್ಲ.**

7) **ಸಾಮಾನ್ಯ ಸೂಚನೆಗಳು:**

ಅ) ಅರ್ಜಿಸಲ್ಲಿಸಿದ ನಿವೃತ್ತ ಅಧಿಕಾರಿಗಳು ಯಾವುದೇ ತಪ್ಪು ಮಾಹಿತಿಯನ್ನು ನೀಡಿರುವುದು ಕಂಡು ಬಂದಲ್ಲಿ ಅವರ ನೇಮಕಾತಿಯನ್ನು ಅನರ್ಹಗೊಳಿಸಲಾಗುವುದು.

ಆ) ನಿಗಮವು ಈ ಗುತ್ತಿಗೆ ನೇಮಕಾತಿಯನ್ನು ಭಾಗಶಃ/ಪೂರ್ಣವಾಗಿ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಆಧಿಕಾರವನ್ನು ಹೊಂದಿದೆ.

ಇ) ಈ ಗುತ್ತಿಗೆ ಆಧರದ ನೇಮಕಾತಿಯು ನಿಗಮದ ಷರತ್ತು ಮತ್ತು ನಿಬಂಧನೆಗೆ ಒಳಪಟ್ಟಿರುತ್ತದೆ

**ನಿರ್ದೇಶಕರು(ಮಾ.ಸಂ.)**